

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ದೂರದ ಗುಡ್ಡ ಕಣ್ಣಿಗೆ ನುಣ್ಣಗೆ!....

ಅಮೇರಿಕಾ ದೇಶಕ್ಕೆ ನಾವು ಬರುವುದು ಈ ದೇಶವನ್ನು ನೋಡಲು ಅಲ್ಲ, ಈ ದೇಶದಲ್ಲಿರುವ ಭಾರತವನ್ನು ನೋಡಲು. ಈ ದೇಶಕ್ಕೆ ಬಂದಷ್ಟೂ ಭಾರತದ ಹಿರಿಮೆ-ಗರಿಮೆಗಳ ಅರಿವು ಹೆಚ್ಚುತ್ತಾ ಹೋಗುತ್ತದೆ. ಇಲ್ಲಿರುವ ನಮ್ಮವರ ಸಾಧನೆಯನ್ನು ನೋಡಿ ಹೆಮ್ಮೆ ಎನಿಸುತ್ತದೆ. ಸುಮಾರು 35,36,000 ಚದರ ಮೈಲಿ ವಿಸ್ತೀರ್ಣವುಳ್ಳ ಅಮೇರಿಕಾ ಭೌಗೋಲಿಕವಾಗಿ ಭಾರತಕ್ಕಿಂತ ಮೂರು ಪಟ್ಟು ದೊಡ್ಡದಾಗಿದ್ದರೂ ಜನಸಂಖ್ಯೆಯ ದೃಷ್ಟಿಯಿಂದ ಭಾರತಕ್ಕಿಂತ ನಾಲ್ಕುಪಟ್ಟು ಚಿಕ್ಕದು. ಭಾರತದ ಜನಸಂಖ್ಯೆ ಸುಮಾರು 117 ಕೋಟಿ ಇದ್ದರೆ, ಅಮೇರಿಕೆಯ ಜನಸಂಖ್ಯೆ ಸುಮಾರು 31 ಕೋಟಿ ಮಾತ್ರ. ಅಮೇರಿಕಾ ದೇಶದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಒಟ್ಟು ಜನಸಂಖ್ಯೆ ಸುಮಾರು 30 ಲಕ್ಷ. ಇವರಲ್ಲಿ ಫಿಜಿ, ಕೀನ್ಯಾ, ಟಾನ್ಜೇನಿಯಾ, ಉಗಾಂಡಾ, ಇಂಗ್ಲೆಂಡ್ ಇತ್ಯಾದಿ ಬೇರೆ ಬೇರೆ ದೇಶಗಳಲ್ಲಿ ನೆಲೆಸಿದ್ದ ಭಾರತೀಯರು ರಾಜಕೀಯ ಮತ್ತಿತರ ಕಾರಣಗಳಿಂದಾಗಿ ಆ ದೇಶಗಳನ್ನು ಬಹಳ ಹಿಂದೆಯೇ ತೊರೆದು ಬಂದವರಿದ್ದಾರೆ. ಇತ್ತೀಚಿನ ದಶಕಗಳಲ್ಲಿ ಉನ್ನತ ಅಧ್ಯಯನ ಮತ್ತು ಆಧುನಿಕ ತಂತ್ರಜ್ಞಾನದ ಕಾರಣಗಳಿಂದಾಗಿ ನೇರವಾಗಿ ಭಾರತದಿಂದ ಬಂದವರಿದ್ದಾರೆ. ಜನಸಂಖ್ಯೆಯಲ್ಲಿ ಚೀನಾ ಮತ್ತು ಫಿಲಿಫೈನ್ಸ್ ದೇಶದವರನ್ನು ಬಿಟ್ಟರೆ ನಮ್ಮವರು ಮೂರನೆಯ ಸ್ಥಾನದಲ್ಲಿದ್ದಾರೆ.

ಅನಿವಾಸಿ ಭಾರತೀಯರು ಹೆಚ್ಚಿಗೆ ವಾಸವಾಗಿರುವ ರಾಜ್ಯಗಳೆಂದರೆ ನ್ಯೂಯಾರ್ಕ್, ನ್ಯೂಜೆರ್ಸಿ, ಟೆಕ್ಸಾಸ್, ಇಲಿನಾಯ್ಸ್, ಪೆನ್ಸಿಲ್‌ವೇನಿಯಾ, ಫ್ಲಾರಿಡಾ, ಮಿಚಿಗನ್, ಮೇರಿಲ್ಯಾಂಡ್, ವರ್ಜೀನಿಯಾ, ಜಾರ್ಜಿಯಾ, ಒಹಾಯೋ ಮತ್ತು ಕ್ಯಾಲಿಫೋರ್ನಿಯಾ. ಅತ್ಯುನ್ನತ ಶಿಕ್ಷಣ ಪಡೆದವರಲ್ಲಿ ಬೇರೆ ದೇಶದವರಿಗಿಂತಲೂ ಭಾರತದಿಂದ ವಲಸೆ ಬಂದವರ ಸಂಖ್ಯೆಯೇ ಜಾಸ್ತಿ. ಬರ್ಕಲಿ ವಿಶ್ವವಿದ್ಯಾನಿಲಯದ ಅಧ್ಯಯನದ ಪ್ರಕಾರ ಸಿಲಿಕಾನ್ ವ್ಯಾಲಿಯಲ್ಲಿ ಕೆಲಸಮಾಡುತ್ತಿರುವ ಸಾಫ್ಟ್‌ವೇರ್ ಇಂಜಿನಿಯರುಗಳಲ್ಲಿ 1/3 ಭಾಗದಷ್ಟು ಇಂಜಿನಿಯರುಗಳು ಭಾರತದಿಂದ ಬಂದವರು. ಭಾರತದ ಅತ್ಯುತ್ತಮ ಮೇಧಾಶಕ್ತಿಯುಳ್ಳವರು ಮತ್ತು ಅತಿಬುದ್ಧಿವಂತರು ಅಮೇರಿಕಾ ದೇಶಕ್ಕೆ ವಲಸೆ ಬಂದಿರುವುದಾಗಿ ಥಾಮಸ್ ಫ್ರೀಡ್‌ಮನ್ (Thomas Friedman) ಎಂಬ ಲೇಖಕರು ತಮ್ಮ ಇತ್ತೀಚಿನ 'The World is Flat' ಎಂಬ ಪುಸ್ತಕದಲ್ಲಿ ಬರೆಯುತ್ತಾ ಹೇಗೆ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಪ್ರತಿಭಾಪಲಾಯನ (Brain Drain) ಆಗುತ್ತಿದೆಯೆಂದು ವಿಶ್ಲೇಷಣೆ ಮಾಡಿರುತ್ತಾರೆ. ಬೇರೆಲ್ಲ ದೇಶಗಳಿಂದ ಬಂದವರಿಗಿಂತ ಭಾರತದಿಂದ ಬಂದವರೇ ಹೆಚ್ಚಿನ ಗುಣಮಟ್ಟದ ವಿದ್ಯಾಭ್ಯಾಸ ಹೊಂದಿದವರು. ಒಂದು ಅಧ್ಯಯನದ ಪ್ರಕಾರ ಸುಮಾರು 35 ಸಾವಿರ ಭಾರತೀಯ ವೈದ್ಯರು ಈ ದೇಶದಲ್ಲಿದ್ದಾರೆ. ಆರಂಭದಲ್ಲಿ ಬಂದ ಅನಿವಾಸಿ ಭಾರತೀಯರಲ್ಲಿ ಹೆಚ್ಚಿನವರು ಗುಜರಾತಿಗಳು ಮತ್ತು ಪಂಜಾಬಿಗಳು. ಟ್ಯಾಕ್ಸಿ ಚಾಲಕರಾಗಿ, ಕೂಲಿಕಾರ್ಮಿಕರಾಗಿ ಅಥವಾ ಸಣ್ಣ ಸಣ್ಣ ವ್ಯಾಪಾರಸ್ಥರಾಗಿ ಉದ್ಯೋಗ ಅರಸಿ ಬಂದವರು. ಈಗ ದೊಡ್ಡ ದೊಡ್ಡ ಉದ್ದಿಮೆದಾರರಾಗಿ, ವೈದ್ಯರಾಗಿ, ಇಂಜಿನಿಯರುಗಳಾಗಿ ಭಾರತದಿಂದ ಬರುತ್ತಿದ್ದಾರೆ. ಆರ್ಥಿಕವಾಗಿ ಅಮೇರಿಕನ್ನರಿಗಿಂತಲೂ ಸಬಲರಾಗಿ ಬೆಳೆದಿದ್ದಾರೆ. ಇತ್ತೀಚೆಗೆ ರಾಜಕೀಯವಾಗಿಯೂ ಒಳ್ಳೊಳ್ಳೆಯ ಸ್ಥಾನಮಾನಗಳನ್ನು ಪಡೆದವರಿದ್ದಾರೆ. ಶೈಕ್ಷಣಿಕವಾಗಿ ಅನಿವಾಸಿ ಭಾರತೀಯರ ಮಕ್ಕಳು ಮಾಡಿರುವ ಸಾಧನೆಯಂತೂ ರಾಷ್ಟ್ರಮಟ್ಟದಲ್ಲಿ ಉತ್ತುಂಗಶಿಖರವನ್ನೇರಿದೆ.

Indian Americans ಮತ್ತು American Indians ಎಂದರೆ ಒಂದೇ ಅಲ್ಲ. ಇವೆರಡು ಶಬ್ದಪ್ರಯೋಗಗಳಲ್ಲಿ ಬಹಳ ಅರ್ಥವ್ಯತ್ಯಾಸವಿದೆ. ಭಾರತದಿಂದ ಅಮೇರಿಕೆಗೆ ವಲಸೆ ಬಂದವರಿಗೆ Indian Americans ಎಂದು ಕರೆಯುತ್ತಾರೆ. ಅಮೇರಿಕಾದ ಮೂಲನಿವಾಸಿಗಳಿಗೆ American Indians ಅಥವಾ Native Indians ಎಂದು ಕರೆಯುತ್ತಾರೆ. ಇವೆರಡು ಶಬ್ದಗಳ ಅರ್ಥಗ್ರಹಿಕೆಯಲ್ಲಿ ವ್ಯತ್ಯಾಸ ಉಂಟಾಗದಿರಲೆಂದು ಭಾರತೀಯರನ್ನೂ ಒಳಗೊಂಡಂತೆ ಏಷಿಯಾ ಖಂಡದಿಂದ ಬಂದವರೆಲ್ಲರನ್ನೂ Asian Americans ಎಂದು ಕರೆಯುವ ವಾಡಿಕೆಯೂ ಇದೆ. ಈ ದೇಶದಲ್ಲಿ ಬಿಳಿಯರು ಕರಿಯರು ಎಂಬ ವರ್ಣಭೇದವಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ನಮ್ಮಲ್ಲಿ ಹಿಂದುಳಿದವರನ್ನು 'ಹೊಲೆಯ, ಮಾದಿಗ' ಎಂದರೆ ಜನಾಂಗದ ನಿಂದನೆಯೆಂದು ಹೇಗೆ ಪರಿಗಣಿಸಲಾಗುತ್ತದೆಯೋ ಹಾಗೆ ಅಮೇರಿಕೆಯಲ್ಲಿ ಕರಿಯರನ್ನು 'ನೀಗ್ರೋ' ಎಂದು ಕರೆದರೆ ಜನಾಂಗನಿಂದನೆಯಾಗುತ್ತದೆ. ಅಂತಹ ಕರಿಯರಲ್ಲಿ ಒಬ್ಬರಾದ ಒಬಾಮಾ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಈ ದೇಶದ ಪ್ರಜಾಪ್ರಭುತ್ವದ ಪರಿಪಕ್ವತೆಯನ್ನು ಎತ್ತಿತೋರಿಸುತ್ತದೆ. ಸಂಸ್ಕೃತದ ಕೆಲವು ವಿಶಿಷ್ಟನಾಮಪದಗಳಿಗೆ ಅವುಗಳ ಒಂದೊಂದು ಅಕ್ಷರಕ್ಕೂ ಒಂದೊಂದು ವಿಶಿಷ್ಟ ಅರ್ಥವನ್ನು ನೀಡುವ ಪರಿಪಾಠವಿದೆ. ಉದಾಹರಣೆಗೆ 'ಗು' ಎಂದರೆ ಕತ್ತಲು 'ರು' ಎಂದರೆ ಬೆಳಕು, ಅಜ್ಞಾನವೆಂಬ ಅಂಧಕಾರವನ್ನು ಹೊಡೆದೋಡಿಸಿ ಜ್ಞಾನವೆಂಬ ಬೆಳಕನ್ನು ನೀಡುವವನೇ 'ಗುರು' ಎಂದು ವ್ಯಾಖ್ಯಾನಿಸುತ್ತಾರೆ. ಹಾಗೆಯೇ ಹೊಸದಾಗಿ ಆಯ್ಕೆಯಾಗಿರುವ ಅಧ್ಯಕ್ಷ ಒಬಾಮಾ ಅವರ ಹೆಸರಿನ ಒಂದೊಂದು ಅಕ್ಷರಕ್ಕೂ ಒಂದೊಂದು ಅರ್ಥವನ್ನು ಅಮೇರಿಕೆಯ ಮಕ್ಕಳು ಕಲ್ಪಿಸಿದ್ದಾರೆ. ಅವರು ಹೇಳುವ ಪ್ರಕಾರ OBAMA ಎಂದರೆ **O**riginally **B**orn **A**frican American to **M**anage **A**merica! ಮಕ್ಕಳ ಬಾಯಿಂದ ಇದನ್ನು ಕೇಳಿದಾಗ ನಮಗೆ ಕರ್ನಾಟಕದ ವಿದ್ಯುತ್ ಇಲಾಖೆಯನ್ನು KEB ಎಂದು ಕರೆಯುತ್ತಿದ್ದ ಕಾಲದಲ್ಲಿ ಅದರ ಒಂದೊಂದೇ ಅಕ್ಷರವನ್ನು ಹಿಡಿದು ಅದರ ಅರ್ಥ

'ಖಾಯಂ ಎಲೆಕ್ಟ್ರಿಸಿಟಿ ಬಂದ್' ಎಂದೂ, ಮಹಾರಾಷ್ಟ್ರದ ವಿದ್ಯುತ್ ಇಲಾಖೆಯನ್ನು (MSEB) ಕುರಿತು 'Monday to Sunday Electricity Bundh' ಎಂದೂ ಲೇವಡಿ ಮಾಡುತ್ತಿದ್ದ ದಿನಗಳು ನೆನಪಾದವು.

ಸುಮಾರು ಎರಡೂವರೆ ಶತಮಾನಗಳಷ್ಟು ಹಿಂದೆ (1776) ಸ್ವಾತಂತ್ರ್ಯವನ್ನು ಪಡೆದ ಅಮೇರಿಕಾದೇಶ ಪ್ರತಿವರ್ಷ ಜುಲೈ 4ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತದೆ. ಅದೇ ದಿನದಂದು ಈ ವರ್ಷ ಚಿಕಾಗೋ ನಗರದಲ್ಲಿ ಸೇರಿದ್ದ ಉತ್ತರ ಅಮೇರಿಕೆಯ ವೀರಶೈವ ಸಮಾಜದ 32ನೆಯ ವಾರ್ಷಿಕಸಮ್ಮೇಳನ ಎರಡೂ ದೇಶಗಳ ರಾಷ್ಟ್ರಗೀತೆಗಳನ್ನು ಹಾಡುವುದರೊಂದಿಗೆ ಆರಂಭವಾಯಿತು. ಇಲ್ಲಿ ಹುಟ್ಟಿ ಬೆಳೆದ ಮಕ್ಕಳು ಅಮೇರಿಕಾದ ರಾಷ್ಟ್ರಗೀತೆಯನ್ನು (O! say can you see by the dawn's early light) ಸುಶ್ರಾವ್ಯವಾಗಿ ಹಾಡಿದಂತೆ ಅವರ ತಂದೆತಾಯಿಗಳಿಗೆ ಹಾಡಲು ಬರುತ್ತಿರಲಿಲ್ಲ. ಭಾರತದ ರಾಷ್ಟ್ರಗೀತೆಯನ್ನು ತಂದೆತಾಯಿಗಳು ಹಾಡಿದಂತೆ ಇಲ್ಲಿಯ ಮಕ್ಕಳಿಗೆ ಹಾಡಲು ಬರುತ್ತಿರಲಿಲ್ಲ. ವಿಭಿನ್ನ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಬೆಳೆಯುತ್ತಿರುವ ಈ ಮಕ್ಕಳಿಗೂ, ಭಾರತದಲ್ಲಿ ಸಂಪ್ರದಾಯಶರಣರಾಗಿ ಬೆಳೆದು ಬಂದ ತಂದೆತಾಯಿಗಳಿಗೂ ಮಧ್ಯೆ ಇರುವ ಅಂತರ ಸ್ಫುಟವಾಗಿ ಗೋಚರಿಸುತ್ತಿತ್ತು! ಎಲ್ಲಿಯೋ ರಾಗತಾಳ ತಪ್ಪಿದೆಯೆಂದು ನಿಚ್ಚಳವಾಗಿ ಕಾಣಿಸುತ್ತಿತ್ತು! ನಮ್ಮ ಸಂಪ್ರದಾಯವನ್ನು ರೂಢಿಸಿಕೊಂಡು ತಮ್ಮ ಮಕ್ಕಳು ಬೆಳೆಯಬೇಕೆಂಬ ತಂದೆತಾಯಿಗಳ ಆಶಾಗೋಪುರ ಕಳಚಿಬೀಳುವ ದಿನಗಳು ಬಹಳ ದೂರದಲ್ಲಿಲ್ಲ! ಒಂದೆಡೆ ಜಾತಿಯನ್ನು ನಿರಾಕರಿಸಿ ಜಾತಿರಹಿತ, ವರ್ಗರಹಿತ ಸಮಾಜವನ್ನು ಬಸವಣ್ಣ ನಿರ್ಮಿಸಿದ ಎಂದು ಬೋಧಿಸುತ್ತಾ ಮತ್ತೊಂದೆಡೆ ಅನ್ಯಜಾತಿಯವರನ್ನು ಮದುವೆಯಾಗಲು ಪ್ರೋತ್ಸಾಹಿಸದೆ ಸ್ವಜಾತಿಯಲ್ಲಿಯೇ ಮದುವೆಯಾಗುವಂತೆ ಒತ್ತಾಯಿಸುವ ತಂದೆತಾಯಿಗಳು ಇಲ್ಲಿಯ ಮಕ್ಕಳಿಗೆ ಆಷಾಢಭೂತಿ (hypocrites) ಗಳಾಗಿ ಕಾಣಿಸುತ್ತಾರೆ. ಕರ್ನಾಟಕದಲ್ಲಿ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ಎಂದು ಬಡಿದಾಡುವ ಈ ಜನ ಅಮೇರಿಕಾದಲ್ಲಿ ಸದ್ಯ ತಮ್ಮ ಮಕ್ಕಳು ಕ್ರೈಸ್ತರು ಮತ್ತು ಮುಸಲ್ಮಾನರನ್ನು ಬಿಟ್ಟು ನಮ್ಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಂದ ಯಾರನ್ನಾದರೂ ಮದುವೆಯಾಗಲಿ ಎಂದು ರಾಜಿಯಾಗಲು ಹಪಹಪಿಸುತ್ತಾರೆ.

ಮರ್ಯಾದಾಪುರುಷನಾದ ಶ್ರೀರಾಮ ಆದರ್ಶ ರಾಜನೂ ಅಲ್ಲ, ಆದರ್ಶ ಗಂಡನೂ ಅಲ್ಲ (Rama is neither an ideal ruler, nor an ideal husband) ಎಂಬುದು ಇಲ್ಲಿಯ ಮಕ್ಕಳ ವಾದ. ಪ್ರಜಾಭಿಮತಕ್ಕೆ ಮನ್ನಣೆಕೊಟ್ಟು ತನ್ನ ಸ್ವಂತಸುಖವನ್ನೂ ತ್ಯಾಗಮಾಡಿದ ಮಹಾನ್ ವ್ಯಕ್ತಿ ಶ್ರೀರಾಮ ಎಂಬ ವ್ಯಾಖ್ಯಾನವನ್ನು ಇವರು ಒಪ್ಪರು. ಪಿತೃವಾಕ್ಯಪರಿಪಾಲನೆಗಾಗಿ ಶ್ರೀರಾಮನು ಕಾಡಿಗೆ ಹೋಗಬೇಕಾಗಿತ್ತೇ ವಿನಾ ಆತನ ಸಹಧರ್ಮಿಣಿಯಾದ ಸೀತೆ ಅವನೊಂದಿಗೆ ಕಾಡಿಗೆ ಹೋಗಬೇಕಾದ ಪ್ರಮೇಯವಿರಲಿಲ್ಲ. ಆದರೂ ಗಂಡನ ಮೇಲಿನ ಪ್ರೀತಿಯಿಂದ ಅರಮನೆಯ ಸುಖಸುಪ್ಪತ್ತಿಗೆಯನ್ನು ಕಡೆಗಣಿಸಿ ತನ್ನ ಪತಿಯೊಂದಿಗೆ ಕಾಡಿಗೆ ನಡೆದಳು. ಬಂದ ಎಲ್ಲ ಕಷ್ಟಕೋಟಲೆಗಳನ್ನು ಚಕಾರವೆತ್ತದೆ ಅನುಭವಿಸಿದಳು. ಅಂಥವಳನ್ನು ಯಾರೋ ಒಬ್ಬ ಅಗಸನು ಆಡಿದ ಮಾತನ್ನು ಕೇಳಿಸಿಕೊಂಡು ತುಂಬು ಗರ್ಭಿಣಿಯಾದ ಸೀತೆಯನ್ನು ಕಾಡಿಗಟ್ಟಿದ ಮಹಾಕ್ರೂರಿ ರಾಮ ಎನ್ನುತ್ತಾರೆ ಇಲ್ಲಿಯ ಮಕ್ಕಳು. ದಾರಿಬೀದಿಗಳಲ್ಲಿ ಜನರಾಡುವ ಮಾತುಗಳನ್ನು ಕೇಳಿಸಿಕೊಂಡು ಸ್ವತಂತ್ರ ಅಭಿಪ್ರಾಯವಿಲ್ಲದವನು ರಾಜ್ಯವನ್ನು ಹೇಗೆ ಆಳಿಯಾನು? ಎಂದು ಪ್ರಶ್ನಿಸುತ್ತಾರೆ. ಅವಳಿಗೆ ಗೊತ್ತಿಲ್ಲದಂತೆ ಲಕ್ಷ್ಮಣನನ್ನು ಗುಟ್ಟಾಗಿ ಕರೆದು ಕಾಡಿನಲ್ಲಿ ಅವಳನ್ನು ಬಿಟ್ಟು ಬಾ ಎಂದು ಹೇಳಿದ್ದು ಎಂತಹ ಹೇಯಕೃತ್ಯ ಎಂದು ಹೀಗಳೆಯುತ್ತಾರೆ. ರಾಣಿಯಾಗಿ ಅಲ್ಲದಿದ್ದರೂ ರಾಜ್ಯದ ನಾಗರೀಕಳಾಗಿ ಕಷ್ಟದಲ್ಲಿದ್ದ ಆಕೆಗೆ ಸಾಧಾರಣ ಸೌಲಭ್ಯವನ್ನೂ ಒದಗಿಸದ ರಾಮನ ಕಠೋರ ವರ್ತನೆಯನ್ನು ಖಂಡಿಸುತ್ತಾರೆ. ತನ್ನ ಹೆಂಡತಿ ಎಂಥವಳು ಎಂಬುದು ನಿಜವಾದ ಗಂಡನಿಗೆ ಗೊತ್ತಿರಬೇಕು. ಅಗ್ನಿದೇವತೆಯ ಸಾಕ್ಷಿಯಾದರೂ ಏಕೆ ಬೇಕಿತ್ತು? ತನ್ನ ಸಹಧರ್ಮಿಣಿ ಸೀತೆ ಪರಿಶುದ್ಧಳು, ಸದಾಚಾರಸಂಪನ್ನೆ, ಸುಚರಿತಳು ಎಂದು ಅಗ್ನಿದೇವತೆಯಿಂದ ಸಾಬೀತಾದ ಮೇಲೂ ಪ್ರಜೆಗಳ ಎದುರಿಗೆ ಅದಳನ್ನು ಸಮರ್ಥಿಸಿಕೊಳ್ಳಲಿಲ್ಲವೇಕೆ? ಅಷ್ಟಕ್ಕೂ ಪ್ರಜಾಭಿಮತ ವಿರುದ್ಧವಾಗಿದ್ದರೆ ಪಿತೃವಾಕ್ಯಪರಿಪಾಲನೆಗಾಗಿ ಕಾಡಿಗೆ ಹೋದಂತೆ ಸತ್ಯಪಕ್ಷಪಾತಿಯಾಗಿ ರಾಜ್ಯವನ್ನೇ ತೊರೆದು ಸೀತೆಯೊಂದಿಗೆ ಮತ್ತೆ ಕಾಡಿಗೆ ಹೋಗಬಹುದಾಗಿತ್ತಲ್ಲಾ? ತನ್ನೊಟ್ಟಿಗೆ ಕಾಡುಮೇಡುಗಳನ್ನು ಸುತ್ತಿದ ಆ ಜೀವಕ್ಕೆ ಸಾಂತ್ವನ ಹೇಳಿ ನ್ಯಾಯ ಒದಗಿಸಬಹುದಾಗಿತ್ತಲ್ಲಾ? ಅಬ್ಬಬ್ಬಾ! ಈ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಲು ಎಂಟೆದೆ ಬೇಕು. ಶ್ರೀರಾಮನು ಕಾಡಿಗೆ ಓಡಿಸಿದ್ದು ಸೀತೆಯನ್ನಲ್ಲ ರಾಣಿಯನ್ನು ಅಥವಾ ಸೀತೆಯ ನೆರಳನ್ನು ಎಂದು ನೀಡುವ ಸಾಂಪ್ರದಾಯಿಕ ಉತ್ತರದಿಂದ ಇವರನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ನಮ್ಮ ದೇಶದ ಪುರಾಣಪ್ರಸಿದ್ಧ ಆದರ್ಶಪುರುಷರೆಲ್ಲರೂ ಹೀಗೆ 'ಊರಿಗೆ ಉಪಕಾರಿ ಮನೆಗೆ ಮಾರಿ' ಎಂದು ಒಪ್ಪಿಕೊಳ್ಳದೆ ಗತ್ಯಂತರವಿಲ್ಲ ಎನಿಸುತ್ತದೆ. ಆ ರಾಮಚಂದ್ರನೇನಾದರೂ ಇವರ ಕೈಗೆ ಸಿಕ್ಕಿದ್ದರೆ ಅವನ ಜಾತಕವನ್ನು ಜಾಲಾಡಿ ಸಿಂಹಾಸನದಿಂದ ಕೆಳಗಿಳಿಸುತ್ತಿದ್ದರೋ ಏನೋ! ಕೋರ್ಟುಕಛೇರಿಗಳಿಗೆ ಎಳೆಸಿ ನಿರಪರಾಧಿ ಸೀತೆಗೆ Alumini ಕೊಡಿಸಲು ಯತ್ನಿಸುತ್ತಿದ್ದರೋ ಏನೋ ಆ ಶ್ರೀರಾಮಚಂದ್ರನೇ ಬಲ್ಲ!

ಚಿಕಾಗೋ ನಗರದ ಹೆಸರು ಕೇಳಿದಾಕ್ಷಣ ಭಾರತೀಯರು ರೋಮಾಂಚಿತರಾಗುತ್ತಾರೆ. ಅದಕ್ಕೆ ಕಾರಣ ಶತಮಾನದ ಹಿಂದೆ ವಿಶ್ವಧರ್ಮಸಮ್ಮೇಳನದಲ್ಲಿ 'ನನ್ನ ಪ್ರೀತಿಯ ಸೋದರಿಯರೇ ಸೋದರರೇ' ಎಂದು ಕ್ಷಣಾರ್ಧದಲ್ಲಿ ಅಮೇರಿಕಾ ದೇಶದ ಜನರ ಹೃದಯವನ್ನು ಗೆದ್ದು ನೆರೆದಿದ್ದ ಸಭೆಯನ್ನು ತುದಿಗಾಲ ಮೇಲೆ ನಿಲ್ಲಿಸಿದ ಕಂಚಿನ ಕಂಠದ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರು. ಇಂದು ಚಿಕಾಗೋ ನಗರಕ್ಕೆ ಬಂದ ಸ್ವಾಮಿಗಳೆಲ್ಲರೂ ಸ್ವಾಮಿ ವಿವೇಕಾನಂದರಾಗಲು ಸಾಧ್ಯವಿಲ್ಲ. 116 ವರ್ಷಗಳ ಹಿಂದೆ ಸಾರ್ವಜನಿಕ ವೇದಿಕೆಯಲ್ಲಿ ಮೊಟ್ಟಮೊದಲಿಗೆ ಅವರು ಬಳಸಿದ ಆ ನುಡಿಗಟ್ಟು ಈಗ ಸವಕಳಿಯಾಗಿ 'ಮಹನೀಯರೇ ಮತ್ತು ಮಹಿಳೆಯರೇ' ಎಂಬ ಸಾಂಪ್ರದಾಯಿಕ ನುಡಿಗಟ್ಟಿಗಿಂತ ಭಿನ್ನವಾಗಿಯೇನೂ ಧ್ವನಿಸುತ್ತಿಲ್ಲ! ಸ್ವಾಮಿ ವಿವೇಕಾನಂದರ ದಿವ್ಯಸಂದೇಶದಿಂದ ಪುಳಕಗೊಂಡಿದ್ದ ಚಿಕಾಗೋ ನಗರವೂ ಸಹ ಈಗ ವಿಶ್ವಕ್ಕೆ ಮಾದರಿಯಾಗಿ ಏನೂ ಉಳಿದಿಲ್ಲ. ಈ ನಗರ ಇರುವ ಇಲಿನಾಯ್ಸ್ ರಾಜ್ಯ ಅಮೇರಿಕಾದೇಶದಲ್ಲಿಯೇ ಅತ್ಯಂತ ಭ್ರಷ್ಟರಾಜ್ಯವೆಂಬ ಕುಖ್ಯಾತಿಯನ್ನು ಪಡೆದಿದೆ. ಭ್ರಷ್ಟಾಚಾರದಲ್ಲಿ ಇದಕ್ಕೆ ಪೈಪೋಟಿಯನ್ನು ನಡೆಸುತ್ತಿರುವ ಈ ದೇಶದ ಮತ್ತೊಂದು ರಾಜ್ಯವೆಂದರೆ ಲೂಸಿಯಾನಾ (Louisiana). ಸ್ವಾಮಿ ವಿವೇಕಾನಂದರ ಪ್ರಭಾವಕ್ಕಿಂತ ನಮ್ಮ ದೇಶದ ರಾಜಕಾರಣಿಗಳ ಪ್ರಭಾವವೇ ಇವೆರಡು ರಾಜ್ಯಗಳ ಮೇಲೆ ಆದಂತಿದೆ. ಇಲಿನಾಯ್ಸ್ ರಾಜ್ಯವನ್ನು 'Land of Lincoln' ಎಂದು ಬಣ್ಣಿಸುತ್ತಾರೆ. ಪ್ರಜಾಪ್ರಭುತ್ವವನ್ನು ಪ್ರಜೆಗಳ, ಪ್ರಜೆಗಳಿಗಾಗಿ,

ಪ್ರಜೆಗಳಿಂದ ರಚಿತವಾದ ಸರ್ಕಾರ ಎಂದು ಉದ್ಘೋಷಿಸಿದ ಲಿಂಕನ್ ಅಂತಹ ಮಹಾನುಭಾವನಿದ್ದ ಈ ರಾಜ್ಯವನ್ನು ಈಗ 'Land of Greased Palms' (ಲಂಚಕೋರರ ನಾಡು) ಎಂದು ಕರೆಯಲು ವಿಷಾದಿಸುತ್ತಿರುವುದಾಗಿ ಇಲ್ಲಿಯ ಒಂದು ಪ್ರಸಿದ್ಧ ಪತ್ರಿಕೆ ವರದಿ ಮಾಡಿದೆ.

ಚಿಕಾಗೋ ವಿಶ್ವವಿದ್ಯಾನಿಲಯದ ಒಂದು ಅಧ್ಯಯನದ ಪ್ರಕಾರ ಸಾರ್ವಜನಿಕ ರಂಗದಲ್ಲಿ 1971 ರಿಂದ ಇಲ್ಲಿಯವರೆಗೆ ಒಂದು ಸಾವಿರ ಜನರನ್ನು ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ಕಳುಹಿಸಲಾಗಿದೆ. ಹೀಗೆ ಜೈಲಿನ ಕಂಬಿ ಎಣಿಸಿದವರ ಪೈಕಿ ಮೂವರು ಗವರ್ನರ್‌ಗಳು, ಐದು ಜನ ವರಿಷ್ಠ ಅಧಿಕಾರಿಗಳು, ಇಬ್ಬರು ಸೆನೆಟರ್‌ಗಳು, 15 ಜನ ಶಾಸಕರು, ಒಬ್ಬ ಮೇಯರ್, 27 ಜನ ಪುರಸಭಾಸದಸ್ಯರು, 19 ಜನ ಜಿಲ್ಲಾ ನ್ಯಾಯಾಧೀಶರು, 7 ಜನ ಜಿಲ್ಲೆಯ ಅಧಿಕಾರಿಗಳು. ಇತ್ತೀಚೆಗೆ ಒಬಾಮಾ ಅಧ್ಯಕ್ಷರಾದ ಮೇಲೆ ತೆರವಾದ ಸೆನೆಟ್ ಸೀಟಿಗೆ ನಾಮಕರಣ ಮಾಡಲು ಅಪಾರ ಹಣವನ್ನು ಪಡೆದ ಆಪಾದನೆಯ ಮೇರೆಗೆ ಇಲ್ಲಿನ ಗವರ್ನರ್‌ರವರನ್ನು impeach ಮಾಡಲಾಗಿದ್ದು ಸದ್ಯದಲ್ಲಿಯೇ ಅವರನ್ನು ಜೈಲಿಗೆ ಕಳುಹಿಸುವ ಎಲ್ಲ ಸಾಧ್ಯತೆಗಳಿವೆ. ಇಷ್ಟೆಲ್ಲಾ ಭ್ರಷ್ಟಾಚಾರ ನಡೆಯುತ್ತಿರುವುದು ಮೇಲ್ಮಟ್ಟದಲ್ಲಿಯೇ ಹೊರತು ಜನಸಾಮಾನ್ಯರ ಮಟ್ಟದಲ್ಲಿ ಅಲ್ಲ ಎಂಬುದು ಸಮಾಧಾನದ ಸಂಗತಿ. ಚಿಕಾಗೋದಿಂದ ಇಂಡಿಯಾನಾಕ್ಕೆ ಪ್ರಯಾಣಿಸುವಾಗ ಕಾರನ್ನು ಗಂಟೆಗೆ 83 ಮೈಲಿಗಳ ವೇಗದಲ್ಲಿ ನಡೆಸುತ್ತಿದ್ದ ನಮ್ಮ ಶಿಷ್ಯರಾದ ಡಾ. ಶಿವಕುಮಾರ್ ಮಾತಿನ ಭರಾಟೆಯಲ್ಲಿ ಇಂಡಿಯಾನಾ ಪ್ರವೇಶಿಸುತ್ತಿರುವಾಗ ಇದ್ದ ಗಂಟೆಗೆ 65 ಮೈಲಿಗಳ ವೇಗದ ಮಿತಿ ಮೀರಿದ್ದನ್ನು ಹದ್ದಿನ ಕಣ್ಣುಗಳಿಂದ ಗಮನಿಸಿದ ಪೋಲೀಸ್ ಅಧಿಕಾರಿ ತಡೆದು ನಿಲ್ಲಿಸಿ ನಮ್ಮ ಕಣ್ಮುಂದೆಯೇ ದಂಡ ವಿಧಿಸಿ ಟಿಕೆಟ್ ಕೊಟ್ಟ. 'ಸರ್, ಮುಂದೆ ನಗರವನ್ನು ಪ್ರವೇಶಿಸಿದಂತೆ ಇನ್ನೂ ವೇಗದ ಮಿತಿ 55 mph ರಷ್ಟು ಕಡಿಮೆ ಇದೆ, ಗಮನಿಸಿ' ಎಂದು ಕಿವಿಮಾತು ಹೇಳಿ ಮಿಂಚಿನಂತೆ ಮಾಯವಾದ. ನಮ್ಮ ದೇಶದ ಪೋಲೀಸರ ಯಾವ ತೇಂಕಾರವೂ ಅವನಲ್ಲಿರಲಿಲ್ಲ; ಯಾವ ಲಂಚಕ್ಕೂ ಅವನು ಕೈಯೊಡ್ಡಿ ಹಲ್ಲು ಕಿರಿಯಲಿಲ್ಲ! ಶ್ರೀಮದ್‌ಗಾಂಭೀರ್ಯದಿಂದ ಬಂದು ಗೌರವದಿಂದ ಮಾತನಾಡಿಸಿ ತನ್ನ ಕರ್ತವ್ಯವನ್ನು ಶಿಸ್ತಿನಿಂದ ನಿಭಾಯಿಸಿ ನಿರ್ಗಮಿಸಿದ.

ಮರುದಿನ ಕರ್ನಾಟಕದ ಹೋಟೆಲ್ ಉದ್ಯಮಿ ನಟರಾಜ್ ಕೋಟೆ, ವಿಜ್ಞಾನಿ ಡಾ. ರಾಮ ಬೆಳಗಾಜೆ ಮತ್ತು ಕಾಶ್ಮೀರದ ಡಾ. ಕುಲದೀಪ್ ಪಂಡಿತ್ ನೂತನ ಹಿಂದೂ ದೇವಾಲಯದಲ್ಲಿ ಏರ್ಪಡಿಸಿದ್ದ ನಮ್ಮ ಉಪನ್ಯಾಸ. ಸಾಕಷ್ಟು ಸುಖ-ಸಂಪತ್ತನ್ನು ಅನುಭವಿಸಿರುವ ಇಲ್ಲಿಯ ಭಾರತೀಯರಿಗೆ ದೇವರ ಬಗ್ಗೆ ಅಪಾರ ಶ್ರದ್ಧಾಭಕ್ತಿ. ಈ ಜೀವನದ ಆಚೆ ಏನಿದೆಯೆಂದು ತಿಳಿದುಕೊಳ್ಳಬೇಕೆಂಬ ತುಡಿತ. ಧರ್ಮಗುರುಗಳು ಯಾರಾದರೂ ಸಿಕ್ಕರೆ ಆಧ್ಯಾತ್ಮವಿಚಾರಗಳನ್ನು ಕುರಿತು ಅನೇಕ ಜಟಿಲವಾದ ಪ್ರಶ್ನೆಗಳು. ತಣಿಸಲಾಗದ ಅಪಾರ ಜ್ಞಾನದಾಹ. ಪ್ರಶ್ನೋತ್ತರಗಳ ನಂತರ ಎಲ್ಲರಿಗೂ ವಿದಾಯ ಹೇಳಿ ಹಿಂತಿರುಗುವಾಗ ಎಲ್ಲಿಯೋ ಓದಿದ್ದ ಕೆಳಗಿನ ಪದ್ಯ ಮನಸ್ಸಿನಲ್ಲಿ ಸುಳಿದಾಡಿತು:

For those who believe in God
no explanation is necessary
For those who do not believe
no explanation is possible **(Rev. John La Farge S.J.)**

**(ನಂಬಿದವರಿಗೆ ದೇವರಿದ್ದಾನೆಂದು
ನಂಬಿಸುವ ಅಗತ್ಯವಿಲ್ಲ!
ನಂಬದವರಿಗೆ ದೇವರಿದ್ದಾನೆಂದು
ನಂಬಿಸಲು ಸಾಧ್ಯವಿಲ್ಲ!)**

ಮೇಲಿನ ಪದ್ಯದ ವಿಚಾರಸರಣಿಯನ್ನು ಮುಂದುವರಿಸಿ ಹೇಳಬಹುದಾದರೆ ದೇವರನ್ನು ಕುರಿತಂತೆ ಮೂರು ವರ್ಗದ ಜನರಿದ್ದಾರೆ: 1) ನಂಬಿದವರು, 2) ನಂಬದವರು ಮತ್ತು 3) ನಂಬಿಯೂ ನಂಬದವರು. ನಂಬಿದವರು ಪ್ರಶ್ನೆಗಳನ್ನು ಕೇಳುವುದಿಲ್ಲ! ನಂಬದವರು ಉತ್ತರವನ್ನು ಕೇಳಿಸಿಕೊಳ್ಳುವುದಿಲ್ಲ! ನಂಬಿಯೂ ನಂಬದವರು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳದೆ ಬಿಡುವುದಿಲ್ಲ! ಏನೇ ಉತ್ತರ ಕೊಟ್ಟರೂ ಅವರ ಪ್ರಶ್ನೆಗಳ ಬತ್ತಳಿಕೆ ಬರಿದಾಗುವುದಿಲ್ಲ. ಅವರ ಮಾನಸಿಕ ಸ್ಥಿತಿ: 'ಇತ್ತ ಪುಲಿ, ಅತ್ತ ದರಿ!'

**ಚಿಕಾಗೋ
15.7.2009**

**ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ**

❑